

# ದೇವೀಮಾಹಾತ್ಮ್ಯೆ - ಒಂದು ಪಕ್ಷಿನೋಟ

ಸ್ವಾಮಿ ರಾಘವೇಶಾನಂದ

ಭಾರತದಲ್ಲಿ ದೇವೀ ಆರಾಧನೆಯ ಪರಂಪರೆ ಅನನ್ಯವಾದುದು. ಈ ಆರಾಧನೆಗೆ ಆಧಾರಗ್ರಂಥವೇ 'ದೇವೀಮಾಹಾತ್ಮ್ಯೆ' ಅಥವಾ 'ಶ್ರೀದುರ್ಗಾಸಪ್ತಶತೀ'. ವೈದಿಕ, ಶಾಕ್ತ ಪರಂಪರೆಯ ಭಕ್ತರು ಪ್ರತಿದಿನವೂ ಈ ಗ್ರಂಥವನ್ನು ಪಾರಾಯಣ ಮಾಡುತ್ತಾರೆ. ಈ ಗ್ರಂಥವನ್ನು ಕುರಿತು ಇಲ್ಲಿ ಬರೆದಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

**ದೇ**ವಿಯ ಸ್ತೋತ್ರಗಳಲ್ಲಿ ದೇವೀಮಾಹಾತ್ಮ್ಯೆಗೆ ಒಂದು ವಿಶೇಷ ಸ್ಥಾನವಿದೆ. ಇದೊಂದು ಶಾಕ್ತ ಶಾಸ್ತ್ರ ಎಂದು ಪ್ರಸಿದ್ಧಿಯಾಗಿದೆ. ಇದಕ್ಕೆ 'ದುರ್ಗಾಸಪ್ತಶತೀ', 'ಚಂಡೀ' ಎಂಬ ಹೆಸರುಗಳಿವೆ. 'ದುರ್ಗಾಸಪ್ತಶತೀ' ಎಂದರೆ ದುರ್ಗೆಯನ್ನು ೭೦೦ ಶ್ಲೋಕಗಳಿಂದ ಸ್ತುತಿಸುವುದು ಎಂದರ್ಥ. 'ಚಂಡೀ' ಎನ್ನುವುದು ದುರ್ಗೆಯ ಮತ್ತೊಂದು ಹೆಸರಷ್ಟೆ. ದೇವೀಮಾಹಾತ್ಮ್ಯೆ ಮಾರ್ಕಂಡೇಯ ಪುರಾಣದ ಒಂದು ಭಾಗ. ಇದರ ಪಾರಾಯಣ ಅತ್ಯಂತ ಫಲಕಾರಿಯಾದುದು ಮತ್ತು ಶೀಘ್ರವೇ ಫಲ ಕೊಡುವಂಥದ್ದು. ಹೀಗೆ ಫಲ ಪಡೆದಿರುವ ಅನೇಕ ನಿದರ್ಶನಗಳಿವೆ. ಹಲವಾರು ಭಕ್ತರು ತಮ್ಮ ಅನುಭವವನ್ನು ಹೇಳಿಕೊಂಡಿದ್ದಾರೆ. ಕಟ್ಟುಕಥೆಗಳೆಂದು ಅದನ್ನು ತಳ್ಳಿಹಾಕಲಾಗುವುದಿಲ್ಲ. ಇದು ಅವರ ಭಕ್ತಿ, ಶ್ರದ್ಧೆ ಮತ್ತು ಪವಿತ್ರ ಮನಸ್ಸಿನ ಪರಿಣಾಮದಿಂದ ಪಡೆದ ದೇವಿಯ ಅನುಗ್ರಹ. ಅದರ ಸತ್ಯಾಸತ್ಯತೆಯನ್ನು ನಾವೂ ಅದೇ ಭಾವದಿಂದ ಪಾರಾಯಣ ಮಾಡಿ ಪರೀಕ್ಷಿಸಬೇಕಷ್ಟೆ.

ಈ ಗ್ರಂಥವನ್ನು ನಾವು ಬರಿಯ ಕಥೆಯ ರೂಪದಲ್ಲಿ ನೋಡಲು ಹೋದರೆ ಅಂತಹ ವಿಶೇಷವೇನೂ ಕಾಣಬರುವುದಿಲ್ಲ. ಬೇರೆ ಪುರಾಣಗಳಂತೆ ಇದರಲ್ಲೂ ದೇವಿಯು ಅವತಾರವೆತ್ತಿ ಲೋಕಕಲ್ಯಾಣಕ್ಕಾಗಿ ಕೆಲವು ಘೋರ ರಾಕ್ಷಸರನ್ನು ವಧಿಸುವ ಕಥೆಯಷ್ಟೆ ಇದೆ. ಮಹಿಷಾಸುರ, ಶುಂಭ, ನಿಶುಂಭ, ಮಧು-ಕೈಟಭ, ರಕ್ತಬೀಜ, ಧೂಮ್ರಲೋಚನ ಮುಂತಾದ ಅಸುರರನ್ನು ಕೊಲ್ಲುವ ಕಥೆಗಳು ಇಲ್ಲಿವೆ. ಇತರ ಪುರಾಣಗಳಲ್ಲೂ ರಾಕ್ಷಸರನ್ನು ಕೊಲ್ಲುವ ಕಥೆಗಳಿವೆ. ಶಿವ, ವಿಷ್ಣು, ವಿನಾಯಕ ಇತ್ಯಾದಿ ಹಲವಾರು ದೇವರುಗಳು ಅವತಾರವೆತ್ತಿ ಬೇಕಾದಷ್ಟು ರಾಕ್ಷಸರನ್ನು ಕೊಂದಿದ್ದಾರೆ. ಆದರೆ 'ದೇವೀಮಾಹಾತ್ಮ್ಯೆ'ಗೆ ಮಾತ್ರ ಯಾಕೆ ಇಂತಹ ವಿಶೇಷ ಸ್ಥಾನ ದೊರಕಿದೆ? ಕೆಲವು ಸ್ತೋತ್ರಗಳನ್ನು ಮಂತ್ರಗಳು ಎಂದು ಪರಿಗಣಿಸುತ್ತಾರೆ. ದೇವೀಮಾಹಾತ್ಮ್ಯೆ ಕೂಡ ಇದೇ ಬಗೆಯದು. ಇದನ್ನು ಮಂತ್ರಶಾಸ್ತ್ರ ಎಂದು ಹೇಳುತ್ತಾರೆ. ಪ್ರತಿ ಶ್ಲೋಕದಲ್ಲೂ ಮಂತ್ರವು ಅಡಗಿದೆ.

ಉದಾಹರಣೆಗೆ ದೇವೀಮಹಾತ್ಮ್ಯೆಯ ಎರಡನೇ ಶ್ಲೋಕ. ಇದು, ''ಸಾವರ್ಣಿಸ್ಸೂರ್ಯತನಯೋ ಯೋ ಮನುಃ ಕಥ್ಯತೇಽಷ್ಟಮಃ'' ಎಂದು ಆರಂಭವಾಗುತ್ತದೆ. ಸೂರ್ಯತನಯಃ ಎಂದರೆ ಸೂರ್ಯನ ಮಗ. ಅಂದರೆ ಏನು? ಸೂರ್ಯನಿಂದ ಹೊರಬಂದುದು. ಏನದು? ಪ್ರಕಾಶ ಅಥವಾ ಅಗ್ನಿ. ಅಗ್ನಿಯ ಬೀಜಮಂತ್ರ 'ರಂ'. ಬೀಜ ಎಂದರೆ ಶಕ್ತಿಯುಳ್ಳದ್ದು. ದೇವಿಯ ಪೂಜೆಗೆ ಮುಖ್ಯವಾದದ್ದು ಮೂರು. ಮಂತ್ರ, ತಂತ್ರ, ಯಂತ್ರ. ಮಂತ್ರದಲ್ಲಿ ಮುಖ್ಯವಾದದ್ದು ಬೀಜ. ಒಂದು ವೃಕ್ಷದ ಬೀಜದಲ್ಲಿ ಹೆಮ್ಮರವಾಗಿ ಬೆಳೆಯುವ ಶಕ್ತಿ ಹೇಗೆ ಅಡಗಿದೆಯೋ ಅದೇ




'ಶ್ರೀ ದುರ್ಗಾಸಪ್ತಶತೀ' ಗ್ರಂಥದ ವಿವಿಧ ಪ್ರಕಟಣೆಗಳು

ರೀತಿ ಪ್ರತಿ ಮಂತ್ರದ ಬೀಜಾಕ್ಷರದಲ್ಲಿ ಆ ದೇವ-ದೇವಿಯ ಶಕ್ತಿ ಅಡಗಿದೆ. ಬೀಜಮಂತ್ರ ನೋಡುವುದಕ್ಕೆ ಒಂದು ಅಕ್ಷರವಷ್ಟೆ. ಆದರೆ ಅದರಲ್ಲಿ ಅಡಗಿರುವ ಶಕ್ತಿ ಅಪಾರವಾದದ್ದು. ಓಂ, ಹ್ರೀಂ, ಕ್ಲೀಂ, ರಂ, ಯಂ, ಮುಂತಾದವುಗಳು ಕೆಲವು ಬೀಜಮಂತ್ರಗಳು. ಈ ಬೀಜಮಂತ್ರಗಳು ಎಷ್ಟು ಶಕ್ತಿಯುತವಾದುವು ಎಂಬುದನ್ನು ನಾವು ಶ್ರೀರಾಮಕೃಷ್ಣರ ಜೀವನದಲ್ಲಿ ಕಾಣುತ್ತೇವೆ. ಪೂಜಾರಿಗಳು ತಾವು ಪೂಜೆಗೆ ಕುಳಿತಾಗ ತಮ್ಮ ಸುತ್ತ ಒಂದು ಅಗ್ನಿಕೋಟೆಯನ್ನು ಸೃಷ್ಟಿಸಿಕೊಳ್ಳುತ್ತಾರೆ. ಕಾರಣ ತಾವು ಪೂಜೆ ಮಾಡುವಾಗ ಯಾವ ದುಷ್ಟಶಕ್ತಿಗಳೂ ಒಳಗೆ ಪ್ರವೇಶಿಸದೆ ಇರಲಿ ಎಂದು. ಅದಕ್ಕೆ ಪೂಜೆಗೆ ಕುಳಿತ ಮೇಲೆ ತಮ್ಮ ಸುತ್ತ 'ರಂ' ಮಂತ್ರ ಹೇಳುತ್ತಾ ನೀರನ್ನು ಚಿಮುಕಿಸಿಕೊಳ್ಳುತ್ತಾರೆ. 'ರಂ' ಮಂತ್ರ ಅಗ್ನಿಯನ್ನು ಪ್ರತಿನಿಧಿಸುವುದು. ನೀರನ್ನು ತಮ್ಮ ಸುತ್ತ ಚಿಮುಕಿಸಿಕೊಳ್ಳುವುದರಿಂದ ಅಲ್ಲಿ ಅಗ್ನಿಜ್ವಾಲೆ ಉತ್ಪನ್ನವಾಗಿ ಯಾವ ದುಷ್ಟ ಶಕ್ತಿಯೂ ಪೂಜಾರಿಯನ್ನು ಸಮೀಪಿಸಲಾರದು. ಶ್ರೀರಾಮಕೃಷ್ಣರು ಇದನ್ನು ಪ್ರತ್ಯಕ್ಷ ಅನುಭವಿಸಿದ್ದರು. ಅವರು ಪೂಜೆಗೆ ಕುಳಿತು 'ರಂ' ಮಂತ್ರ ಹೇಳುತ್ತಾ ನೀರನ್ನು ಚಿಮುಕಿಸಿದರೆ ಅಲ್ಲಿ ಅಗ್ನಿಜ್ವಾಲೆಯನ್ನು ಕಾಣುತ್ತಿದ್ದರು. ಬೀಜಮಂತ್ರ ಎಂದರೆ ಅದಕ್ಕೆ ಸಂಬಂಧಿಸಿದ ದೇವತೆಯನ್ನು ಜಾಗೃತಗೊಳಿಸುವುದು.

ದೇವೀಮಾಹಾತ್ಮ್ಯೆಯ ಮಹಿಮೆ ಏನೆಂದರೆ, ೭೦೦ ಶ್ಲೋಕಗಳನ್ನು ಪಾರಾಯಣ ಮಾಡಿದರೆ ೭೦೦ ಮಂತ್ರಗಳನ್ನು ಹೇಳಿದಂತೆ. ದೇವೀಮಾಹಾತ್ಮ್ಯೆಯನ್ನು 'ಮಾರ್ಕಂಡೇಯ ಪುರಾ'ಣದಲ್ಲಿ ಮಾರ್ಕಂಡೇಯ ಮಹಾಮುನಿಯು ಜೈಮಿನಿ ಋಷಿಗೆ ಬೋಧಿಸಿದರು. ಅಲ್ಲಿ ಜೈಮಿನಿ ಮಹರ್ಷಿಯು ಮಾರ್ಕಂಡೇಯರ ಬಳಿ ಬಂದು ಕೇಳುತ್ತಾರೆ: ''ನಾನು ಮಹಾಭಾರತವನ್ನು ಪೂರ್ಣ ಕೇಳಿದ್ದೇನೆ, ಆದರೆ ಕೆಲವು ಭಾಗಗಳಲ್ಲಿ ಬಹಳ ಸಂದೇಹಗಳಿವೆ. ಅದನ್ನು ಹೇಗೆ ಪರಿಹರಿಸಿಕೊಳ್ಳಬಹುದು?'' ಅದಕ್ಕೆ ಉತ್ತರವಾಗಿ ಮಾರ್ಕಂಡೇಯರು ಪಕ್ಷಿರೂಪ ತಾಳಿ, ಇಡೀ ಮಹಾತ್ಮ್ಯೆಯನ್ನು ಬೋಧಿಸಿ, ''ಇದನ್ನು ಭಕ್ತಿ ಶ್ರದ್ಧೆಯಿಂದ ನೀನು ಪಾರಾಯಣ ಮಾಡಿದರೆ ದೇವಿಯ ಕೃಪೆಯಿಂದ ನಿನ್ನೆಲ್ಲ ಸಂಶಯಗಳೂ ನಾಶವಾಗುವುವು'' ಎಂದು ಹೇಳಿದರು.

ಈ ಸ್ತೋತ್ರದ ಮತ್ತೊಂದು ವಿಶೇಷವೇನೆಂದರೆ ಹಲವೆಡೆ ಸಂಭಾಷಣೆಯಲ್ಲಿ 'ರಾಜ ಉವಾಚ' 'ಋಷಿ ಉವಾಚ' 'ದೇವಿ ಉವಾಚ' ಮುಂತಾದ ಶಬ್ದಗಳು ಬರುತ್ತವೆ. ಅವುಗಳೂ ಶ್ಲೋಕದ ಒಂದೊಂದು ಮಂತ್ರ. ಇದನ್ನು ನಾವು ಮೋಕ್ಷಶಾಸ್ತ್ರವಾದ ಭಗವದ್ಗೀತೆಯಲ್ಲಿ ಕಾಣುವುದಿಲ್ಲ. ಅದೂ ೭೦೦ ಶ್ಲೋಕಗಳ ಗ್ರಂಥ; ಆದರೆ ಅಲ್ಲಿ ಬರುವ 'ಧೃತರಾಷ್ಟ್ರ ಉವಾಚ' 'ಸಂಜಯ ಉವಾಚ' 'ಭಗವಾನ್ ಉವಾಚ', 'ಅರ್ಜುನ ಉವಾಚ' ಮುಂತಾದವುಗಳನ್ನು ಗೀತೆಯ ಸಂಖ್ಯೆಯಲ್ಲಿ ಸೇರಿಸುವುದಿಲ್ಲ.

ದೇವೀಮಾಹಾತ್ಮ್ಯೆಯ ಮೇಲೆ ಅದರ ಅಂತರಂಗವನ್ನು ವಿವರಿಸುವ ಸುಮಾರು ೧೨ ಭಾಷ್ಯಗಳು ಸಂಸ್ಕೃತದಲ್ಲಿವೆ.

ಇದು ಮಂತ್ರಶಾಸ್ತ್ರವಾದುದರಿಂದ, ಇದರ ಬರಿಯ ಪಾರಾಯಣದಿಂದಲೇ ದೇವಿಯು ಪ್ರಸನ್ನಳಾಗಿ ಭಕ್ತರ ಎಲ್ಲ ಕೋರಿಕೆಗಳನ್ನು ಈಡೇರಿಸುತ್ತಾಳೆ. ಅದರಲ್ಲೂ ಶರನ್ನವರಾತ್ರಿಯ ಸಮಯದಲ್ಲಿ ಪಾರಾಯಣ ಮಾಡಿದರಂತೂ ಇನ್ನೂ ವಿಶೇಷ. ಇದನ್ನು ದೇವಿಯೇ ಹದಿಮೂರನೆಯ ಅಧ್ಯಾಯದ ೧೨ ಮತ್ತು ೧೩ನೇ ಶ್ಲೋಕದಲ್ಲಿ ಹೀಗೆ ಹೇಳುತ್ತಾಳೆ. ''ಪ್ರತಿವರ್ಷದ ಶರನ್ನವರಾತ್ರಿ ಕಾಲದಲ್ಲಿ ನನ್ನ ಪೂಜೆಯನ್ನು ಮಾಡಿ, ಅದರ ಅಂಗವಾಗಿ ನನ್ನ ಈ ಮಾಹಾತ್ಮ್ಯೆಯನ್ನು ಭಕ್ತಿಯಿಂದ ಕೂಡಿ ಕೇಳುವ ಮನುಷ್ಯನು ನನ್ನ ಅನುಗ್ರಹದಿಂದ ಸಕಲ ಕಷ್ಟಗಳಿಂದಲೂ ಬಿಡುಗಡೆ ಹೊಂದುವುದಲ್ಲದೆ ಧನ-ಧಾನ್ಯ-ಪುತ್ರಾದಿ ಸೌಖ್ಯಗಳನ್ನು ಹೊಂದುವನೆಂಬುದರಲ್ಲಿ ಯಾವ ಸಂಶಯವೂ ಇಲ್ಲ.''

'ದೇವೀಮಾಹಾತ್ಮ್ಯೆ'ಯಲ್ಲಿ ಹೆಸರೇ ಸೂಚಿಸುವಂತೆ ದೇವಿಯ ಅಸಾಧಾರಣ ಮಾಹಾತ್ಮ್ಯೆವು ಇಲ್ಲಿ ಪ್ರಕಾಶಿಸುತ್ತದೆ. ಇದರಲ್ಲಿ ದೇವಿಯು ಮೂರು ರೂಪಗಳಲ್ಲಿ ಪ್ರಕಾಶಗೊಳ್ಳುತ್ತಾಳೆ. ಅವೇ

ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿ. ೭೦೦ ಶ್ಲೋಕಗಳುಳ್ಳ ೧೩ ಅಧ್ಯಾಯಗಳ ಈ ಗ್ರಂಥವನ್ನು ೩ ಭಾಗವಾಗಿ ವಿಂಗಡಿಸಿ, **ಪ್ರಥಮ ಚರಿತ್ರ, ಮಧ್ಯಮ ಚರಿತ್ರ** ಮತ್ತು **ಉತ್ತಮ ಚರಿತ್ರ** ಎಂದು ಹೆಸರಿಸಲಾಗಿದೆ.

ಮೊದಲನೆಯ ಅಧ್ಯಾಯವು **ಪ್ರಥಮ ಚರಿತ್ರ.** ಇದರಲ್ಲಿ ದೇವಿಯು ಮಹಾಕಾಳಿಯಂತೆ ವಿರಾಜಿಸುತ್ತಾಳೆ.

ಎರಡನೇ ಅಧ್ಯಾಯದಿಂದ ನಾಲ್ಕನೇ ಅಧ್ಯಾಯದವರೆಗೆ **ಮಧ್ಯಮ ಚರಿತ್ರ.** ಇಲ್ಲಿ ದೇವಿಯ ರೂಪ ಮಹಾಲಕ್ಷ್ಮಿ.

ಐದನೆಯ ಅಧ್ಯಾಯದಿಂದ ಹದಿಮೂರನೆಯ ಅಧ್ಯಾಯದವರೆಗೆ **ಉತ್ತಮ ಚರಿತ್ರ.** ಇಲ್ಲಿ ದೇವಿಯು ಮಹಾಸರಸ್ವತಿ ಎಂಬ ರೂಪವನ್ನು ತಾಳುತ್ತಾಳೆ. ದೇವೀಮಾಹಾತ್ಮ್ಯೆಯಲ್ಲಿ ಮುಖ್ಯವಾಗಿ ದೇವಿಯು ಲೋಕಹಿತಕ್ಕಾಗಿ ದೇವತೆಗಳ ಪ್ರಾರ್ಥನೆಯ ಮೇರೆಗೆ ಹಲವಾರು ದೇವಿಯ ಅವತಾರಗಳನ್ನೆತ್ತಿ ಹಲವಾರು ರಾಕ್ಷಸರುಗಳನ್ನು ಕೊಲ್ಲುತ್ತಾಳೆ.

ದೇವೀಮಾಹಾತ್ಮ್ಯೆಯಲ್ಲಿ ನಾಲ್ಕು ಮುಖ್ಯವಾದ ಸ್ತೋತ್ರಗಳಿವೆ. ಸಮಯಾಭಾವದಿಂದ ಇಡೀ ದೇವೀಮಾಹಾತ್ಮ್ಯೆಯನ್ನು ಪಾರಾಯಣ ಮಾಡಲಾಗದವರು ಪ್ರತಿದಿನ ಈ ನಾಲ್ಕು ಸ್ತೋತ್ರಗಳನ್ನು ಪಾರಾಯಣ ಮಾಡಿದರೂ, ಇಡೀ ದೇವೀಮಾಹಾತ್ಮ್ಯೆಯನ್ನು ಪಾರಾಯಣ ಮಾಡಿದ ಪುಣ್ಯ ಲಭಿಸುವುದೆಂಬ ಪ್ರತೀತಿ ಇದೆ.

ಈ ನಾಲ್ಕು ಸ್ತೋತ್ರಗಳು ಕೆಳಗಿನಂತಿವೆ:

೧) ಮೊದಲನೆ ಅಧ್ಯಾಯದ ೭೦ನೇ ಶ್ಲೋಕದಿಂದ ೮೭ರವರೆಗೆ

೨) ನಾಲ್ಕನೆಯ ಅಧ್ಯಾಯದ ೨ನೇ ಶ್ಲೋಕದಿಂದ ೨೭ನೇ ಶ್ಲೋಕದವರೆಗೆ

೩) ಐದನೆಯ ಅಧ್ಯಾಯದ ೯ನೇ ಶ್ಲೋಕದಿಂದ ೮೨ನೆಯ ಶ್ಲೋಕದವರೆಗೆ. (ಇದಕ್ಕೆ 'ಅಪರಾಜಿತಾ ಸ್ತೋತ್ರ' ಎಂದೂ ಹೇಳುತ್ತಾರೆ.)

೪) ಹನ್ನೊಂದನೆಯ ಅಧ್ಯಾಯದ ೨ನೇ ಶ್ಲೋಕದಿಂದ ೩೫ರವರೆಗೆ (ಇದನ್ನು 'ನಾರಾಯಣೀ ಸ್ತುತಿ'ಯೆಂದು ಕರೆಯುತ್ತಾರೆ)

**ಪ್ರಥಮ ಚರಿತ್ರೆ**

ದೇವೀ ಮಹಾತ್ಮ್ಯೆ ಒಂದು ಪೀಠಿಕೆಯ ಕಥೆಯೊಡನೆ ಪ್ರಾರಂಭವಾಗುತ್ತದೆ. ಇದರಲ್ಲಿ ಮೂರು ಮುಖ್ಯ ಪಾತ್ರಗಳು. ಸುರಥ ಎಂಬ ರಾಜ, ಸಮಾಧಿ ಎಂಬ ವೈಶ್ಯ , ಸುಮೇಧನೆಂಬ ಋಷಿ.

ಸುರಥ ದೊಡ್ಡ ರಾಜನಾಗಿ ತನ್ನ ರಾಜ್ಯವನ್ನಾಳುತ್ತಿದ್ದ. ಅವನಿಗೆ ಕೋಲಾವಿಧ್ವಂಸರೆಂಬ ಪಕ್ಕದ ರಾಜ್ಯದ ಶತ್ರುಗಳು. ಅವರ ಬಳಿ ಕಡಿಮೆ ಸೈನ್ಯವಿತ್ತು. ಆದರೂ ಅವರು ಇವನನ್ನು ವಂಚನೆ ಯಿಂದ ಸೋಲಿಸಿದರು. ಆಗ ಸುರಥನು ತನ್ನ ದೇಶಕ್ಕೆ ಹಿಂದಿರುಗಿ ಬಂದು ತನ್ನ ದೇಶಕ್ಕೆ ಮಾತ್ರ ರಾಜನಾಗಿದ್ದನು. ಆದರೆ ಮತ್ತೆ ಪ್ರಬಲರಾದ ಶತ್ರುಗಳು ಅವನನ್ನು ಆಕ್ರಮಿಸಿದರು. ಆದರೆ ಈ ಬಾರಿ ದುರಾತ್ಮರೂ, ಪ್ರಬಲರೂ ಆದ ತನ್ನ ಮಂತ್ರಿ ಗಳ ಪಿತೂರಿ ಯಿಂದ ಅವನ ಭಂಡಾರ, ಸೈನ್ಯ, ಸಂಪತ್ತುಗಳು ಅಪಹರಿಸಲ್ಪಟ್ಟವು. ಅನಂತರ ತನ್ನ ಸ್ವಾಮಿತ್ವವನ್ನು ಕಳೆದು ಕೊಂಡಿದ್ದ ರಾಜನು ಬೇಟೆಯಾಡುವ ನೆಪದಿಂದ ಏಕಾಂಗಿಯಾಗಿ ಕುದುರೆಯನ್ನು ಹತ್ತಿ, ದಟ್ಟವಾದ ಕಾಡೊಂದನ್ನು ಪ್ರವೇಶಿಸಿ ದನು. ಪಾಪ, ಅವನ ಪರಿಸ್ಥಿತಿಯನ್ನು ಆಲೋಚಿಸಿ. ಬಡವನಾಗಿ ಹುಟ್ಟಿ ಬಡತನದ ಜೀವನ ನಡೆಸುವುದು ಸುಲಭ. ಆದರೆ ಶ್ರೀಮಂತಿಕೆಯಿಂದ ಬಡತನಕ್ಕೆ ದೂಡಿಬಿಟ್ಟರೆ ಹೇಗಿರುತ್ತದೆ ? ಈ ಗ್ರಂಥದ ಇನ್ನೊಬ್ಬ ಪಾತ್ರಧಾರಿ ಎಂದರೆ ಸಮಾಧಿ ಎಂಬ ವೈಶ್ಯ. ಸಮಾಧಿ ಧನಾಢ್ಯ, ಆದರೆ ಅವನ ದುಷ್ಟ ಹೆಂಡತಿ ಹಾಗೂ ಅವನ ಮಕ್ಕಳು ಧನಲೋಭದಿಂದ ಒಟ್ಟಿಗೆ ಸೇರಿಕೊಂಡು ಅವನನ್ನು ಮನೆಯಿಂದ ಹೊರಗೆ ಹಾಕಿದರು. ಅವನು ಐಶ್ವರ್ಯವನ್ನೂ ಹೆಂಡತಿಯನ್ನೂ ಕಳೆದುಕೊಂಡು ಆಪ್ತರಿಂದ ದೂಡಲ್ಪಟ್ಟು ದುಃಖಿತ ನಾಗಿ ಕಾಡು ಸೇರಿದನು. ಇಬ್ಬರೂ ಕಾಡಿನಲ್ಲಿ ಅಲೆದಾಡು ತ್ತಿದ್ದಾಗ ಒಬ್ಬರನ್ನೊಬ್ಬರು ಸಂಧಿಸಿದರು. ಒಬ್ಬರಿಗೊಬ್ಬರು ತಮ್ಮ ಕಷ್ಟವನ್ನು ಹಂಚಿಕೊಂಡರು. ದೂರದಲ್ಲಿ ಒಂದು ಆಶ್ರಮ ಅವರ ಕಣ್ಣಿಗೆ ಬಿದ್ದಿತು. ಆ ಆಶ್ರಮದಲ್ಲಿ ಸುಮೇಧ ಎಂಬ ಮಹಾಮುನಿ ಯೊಬ್ಬನಿದ್ದನು. ಅವರು ಆ ಮುನಿಯ ಬಳಿಗೆ ಹೋಗಿ ಗೌರವಪೂರ್ವಕವಾಗಿ ನಮಸ್ಕರಿಸಿ, ''ತಮ್ಮಲ್ಲಿ ಒಂದು ಪ್ರಶ್ನೆಯನ್ನು ಕೇಳಬೇಕು. ಅದಕ್ಕೆ ತಾವು ಕೃಪೆಯಿಟ್ಟು ಸೂಕ್ತ ಉತ್ತರವನ್ನೀಯಬೇಕು'' ಎಂದರು. ಋಷಿಗಳು ಸಮ್ಮತಿಸಿದರು.

ಸುರಥನು ಹೇಳಿದನು: ''ಮುನಿಶ್ರೇಷ್ಠರೇ, ನನಗೆ ಪ್ರಪಂಚದ ಜ್ಞಾನವಿದ್ದರೂ, ರಾಜ್ಯವನ್ನು ಕಳೆದುಕೊಂಡಿರುವೆ. ಎಲ್ಲಾ ರಾಜ್ಯಾಂಗಗಳಲ್ಲಿಯೂ ಅಜ್ಞಾನಿಯಾಗಿದ್ದರೂ ನನಗೆ ಮಮತ್ವ ವಿದೆಯಲ್ಲಾ ಏಕೆ? ಅದೇ ರೀತಿ ಈತನೂ ಕೂಡ ಪುತ್ರರಿಂದ ಅವಮಾನಗೊಳಿಸಲ್ಪಟ್ಟಿರುವನು. ಹೀಗಿದ್ದರೂ ಈಗಲೂ ಅವರಲ್ಲಿ ವಿಶೇಷ ಪ್ರೀತಿಯುಳ್ಳವನಾಗಿರುವನು. ಹೀಗೆ ಇವನು ಮತ್ತು ಇವನಂತೆಯೇ ನಾನು, ನಾವಿಬ್ಬರೂ ಅತ್ಯಂತ ದುಃಖಿಗಳಾಗಿದ್ದೇವೆ. ವಿಷಯ ವಸ್ತುಗಳಲ್ಲಿರುವ ದೋಷಗಳನ್ನು ಅರಿತಿದ್ದರೂ 'ನನ್ನದು' ಎಂಬ ಭಾವನೆಯಿಂದ ಆಕರ್ಷಿಸಲ್ಪಟ್ಟ ಮನಸ್ಸುಳ್ಳವರಾಗಿದ್ದೇವೆ. ಜ್ಞಾನಿಗಳಾದ ನಮ್ಮಿಬ್ಬರಿಗೂ ಯಾವ ಮೋಹವುಂಟಾಗಿದೆಯೋ ಅದು ಯಾವುದರಿಂದಾಗಿದೆ? ವಿವೇಕಶೂನ್ಯನಾದ ನನಗೂ ಮತ್ತು ಇವನಿಗೂ ಮೂಢತೆಯುಂಟಾಗಿದೆಯಲ್ಲ, ಇದೇಕೆ?'' *(ದೇವೀಮಾಹಾತ್ಮ್ಯೆ, ೧.೩೯-೪೫)*

ಮಹರ್ಷಿಗಳು ಎಲ್ಲವನ್ನೂ ಶಾಂತಚಿತ್ತರಾಗಿ ಕೇಳಿ ಸುಂದರ

ವಾದ ಉತ್ತರವನ್ನು ಕೊಟ್ಟರು:

''ಮಹಾರಾಜ! ನೀನು ಹೇಳಿದ ಬುದ್ಧಿ ಇದೆಯಲ್ಲ ಅದರ ಬಗ್ಗೆ ನೀನು ತುಂಬಾ ಜಂಭಪಡಬೇಕಾಗಿಲ್ಲ. ಇದು ಸಾಮಾನ್ಯ ಪ್ರಾಣಿಗಳಿಗೂ ಇರುತ್ತದೆ. ಉದಾಹರಣೆಗೆ ಒಂದು ಅಳಿಲಿಗೆ ಮರದಲ್ಲಿ ಯಾವ ಕಾಯಿ ಸಿಹಿ, ಯಾವ ಕಾಯಿ ಕಹಿ ಎಂದು ಚೆನ್ನಾಗಿ ಗೊತ್ತು. ಅದು ಸಿಹಿಯಾದ ಕಾಯಿಯನ್ನೇ ತಿನ್ನುತ್ತದೆ. ಮೃಗಪಕ್ಷಿಗಳಿಗೆ ಯಾವ ಜ್ಞಾನವಿರುವುದೋ ಆ ಜ್ಞಾನವು ಮನುಷ್ಯರಲ್ಲಿ ಸಾಮಾನ್ಯವಾಗಿಯೇ ಇರುತ್ತದೆ. ಅದೇರೀತಿ ಹಸಿವು, ನಿದ್ರೆ, ಮೊದಲಾದ ಇತರ ಗುಣಗಳು ಇಬ್ಬರಿಗೂ ಸಮಾನ. ತಾವು ಹಸಿವಿನಿಂದ ಬಾಧಿಸಲ್ಪಡುತ್ತಿದ್ದರೂ, ತಮ್ಮ ಹಸಿವನ್ನು ಇಂಗಿಸಿಕೊಳ್ಳಲು ಬೇಕಾದ ಜ್ಞಾನವಿದ್ದರೂ, ತಾವು ತಂದಿರುವ ಕಾಳುಗಳನ್ನು ಆದರದಿಂದ ತಮ್ಮ ಮರಿಗಳ ಕೊಕ್ಕುಗಳಲ್ಲಿ ಹಾಕುತ್ತಿರುವ ಈ ಹಕ್ಕಿಗಳನ್ನು ನೋಡು. ಎಲೈ ಮನುಜ ಶ್ರೇಷ್ಠ, ಪ್ರತ್ಯುಪಕಾರವನ್ನು ಮಾಡುವರೆಂಬ ಲೋಭದಿಂದ ಮಕ್ಕಳಲ್ಲಿ ಮಾನವರು ಅಭಿಲಾಷೆಯುಳ್ಳವರಾಗುತ್ತಾರೆ. ಮರಿಗಳಲ್ಲಿ ಪ್ರೀತಿಯಿಡುತ್ತಿರುವ ಆ ಹಕ್ಕಿಗಳನ್ನು ನೀನು ನೋಡುತ್ತಿಲ್ಲವೆ? ಹಾಗಿದ್ದರೂ ಕೂಡ ಸಂಸಾರದ ಸ್ಥಿತಿಯನ್ನುಂಟು ಮಾಡುತ್ತಿರುವ ಮಹಾಮಾಯೆಯ ಪ್ರಭಾವದಿಂದ ಮಮತೆಯೆಂಬ ಸುಳಿಯಲ್ಲಿ ಮೋಹವೆಂಬ ಹಳ್ಳದಲ್ಲಿ ಬೀಳಿಸಲ್ಪಟ್ಟಿರುವರು. *(ಅಲ್ಲೇ, ೧.೪೬-೫೩)*

ರಾಜನು ಮಹರ್ಷಿಯನ್ನು ಮತ್ತೆ ಪ್ರಶ್ನಿಸುತ್ತಾನೆ: ''ಮಹರ್ಷಿಗಳೆ! ಯಾರನ್ನು ನೀವು 'ಮಹಾಮಾಯೆ' ಎಂದು ಕರೆಯುತ್ತಿರುವಿರೋ ಆ ದೇವಿಯು ಯಾರು? ಅವಳು ಹೇಗೆ ಜನ್ಮವೆತ್ತಿದಳು? ಅವಳು ಮಾಡಿದ ಕಾರ್ಯಗಳೇನು? ಅವಳು ಎಂತಹ ಸ್ವರೂಪವುಳ್ಳವಳು? ಅವೆಲ್ಲವನ್ನೂ ನಿಮ್ಮಿಂದ ಕೇಳಲು ಬಯಸುತ್ತೇನೆ.'' *(ಅಲ್ಲೇ, ೧.೬೦-೬೨).* ಇದಕ್ಕೆ ಋಷಿಯು ಮತ್ತೆ ಹೇಳಿದನು: ''ದೇವಿಯು ಜಗತ್ಪತಿಯಾದ ವಿಷ್ಣುವಿನ ಮಹಾಮಾಯೆ. ಮಹಾಮಾಯೆಯಿಂದಲೇ ಬಂಧಮೋಕ್ಷಗಳಾಗುವುವು. ಕಲ್ಪಾಂತದಲ್ಲಿ ಶ್ರೀಮನ್ನಾರಾಯಣನು ಆದಿಶೇಷನೆಂಬ ಶಯನದ ಮೇಲೆ ಯೋಗನಿದ್ರೆಯಲ್ಲಿರುವಾಗ ಮಧು ಕೈಟಭರೆಂಬ ಅಸುರರು ಬ್ರಹ್ಮನನ್ನು ಕೊಲ್ಲಲು ಯತ್ನಿಸಿದರು. ಆಗ ಬ್ರಹ್ಮನು ವಿಷ್ಣುವನ್ನು ಎಚ್ಚರಗೊಳಿಸಲು ಅವನ ಕಣ್ಣುಗಳಲ್ಲಿದ್ದ ಯೋಗನಿದ್ರೆಯನ್ನು ಪ್ರಾರ್ಥಿಸಿದನು. ಆ ತಾಮಸೀ ರಾತ್ರಿಯಾದ ಯೋಗನಿದ್ರೆಯು ವಿಷ್ಣುವನ್ನು ಎಚ್ಚರಗೊಳಿಸಿ, ಅವನ ಮೂಲಕ ಮಧು-ಕೈಟಭರನ್ನು ನಾಶಮಾಡಿಸಿದಳು. ಆದುದರಿಂದ ದೇವಿಗೆ 'ಮಧುಕೈಟಭನಾಶಿನಿ' ಎಂಬ ಹೆಸರಾಯಿತು.''

**ದ್ವಿತೀಯ ಚರಿತ್ರೆ :** ಇದರಲ್ಲಿ ದೇವಿಯನ್ನು ಮಹಾಲಕ್ಷ್ಮಿಯ ರೂಪದಲ್ಲಿ ಪೂಜಿಸಲಾಗುತ್ತದೆ. ೨ನೆಯ ಅಧ್ಯಾಯದಿಂದ ೪ನೆ ಅಧ್ಯಾಯದವರೆಗೆ ದ್ವಿತೀಯ ಚರಿತ್ರೆಯಾಗುತ್ತದೆ. ಇದನ್ನು 'ಮಧ್ಯಮ ಚರಿತ್ರೆ' ಎಂದು ಹೇಳುತ್ತಾರೆ. ಇದರಲ್ಲಿ ಮಹಾಲಕ್ಷ್ಮಿಯ ವೈಭವ ವಿವರಿಸಲ್ಪಟ್ಟಿದೆ. ಈ ಅಧ್ಯಾಯಗಳ ಸಾರಾಂಶ ಹೀಗಿದೆ: ಅಸುರೇಶ್ವರನಾದ ಮಹಿಷಾಸುರನು ದೇವತೆಗಳನ್ನು ಯುದ್ಧದಲ್ಲಿ ಸೋಲಿಸಿ, ಇಂದ್ರನ ಪದವಿಯನ್ನು ಪಡೆದನು. ಸೋತ ದೇವತೆಗಳೆಲ್ಲಾ ಬ್ರಹ್ಮನನ್ನು ಮುಂದೆ ಮಾಡಿಕೊಂಡು ಶಿವ-ವಿಷ್ಣುವಿನೆಡೆಗೆ ಬಂದರು. ಅವರು ದೇವತೆಗಳ ಸ್ಥಿತಿಗೆ ಮನ ಮರುಗಿ ಮಹಿಷಾಸುರನ ಮೇಲೆ ಕುಪಿತಗೊಂಡರು. ಅನಂತರ ಅತಿ ಕುಪಿತರಾದ ಶಿವ, ವಿಷ್ಣುವಿನ ಮುಖದಿಂದಲೂ, ಇತರ ದೇವತೆಗಳ ಶರೀರದಿಂದಲೂ ಮಹತ್ತಾದ ಒಂದು ತೇಜಃಪುಂಜವು ಹೊರಗೆ ಬಂದಿತು. ಅತುಲವಾದ ಆ ತೇಜಃಪುಂಜವು ಒಂದು ನಾರಿಯ ಆಕಾರವನ್ನು ತಾಳಿ, ದಿಗಂತವನ್ನು ವ್ಯಾಪಿಸಿಕೊಂಡಿತು. ಭಿನ್ನ ಭಿನ್ನ ದೇವತೆಗಳ ತೇಜಸ್ಸುಗಳು ಮಹಾನಾರಿಯ ಅಂಗಗಳಾದವು. ಶಾಂಭವ ತೇಜಸ್ಸು ಅವಳ ಮುಖವಾಯಿತು. ವೈಷ್ಣವ ತೇಜಸ್ಸು ಅವಳ ಬಾಹುಗಳಾದವು. ಬ್ರಹ್ಮ ತೇಜ ಮನಸ್ಸಿನಿಂದ ಅವಳ ಪಾದಗಳಾದವು. ಹೀಗೆಯೇ ಯಮ, ಸೋಮ, ಇಂದ್ರ, ವರುಣ ಇವರ ತೇಜಸ್ಸುಗಳಿಂದ ಕೂದಲು, ಸ್ತನ, ನಡು ಮೊಣಕಾಲು ಮೊದಲಾದ ಅಂಗಗಳಾದವು. ನಂತರ ಇತರ ದೇವತೆಗಳು ಅವರವರ ಆಯುಧಗಳನ್ನು ಆ ದೇವರಿಗೆ ಕೊಟ್ಟರು. ಆ ದೇವಿಯೇ ಮಹಾಲಕ್ಷ್ಮಿ. ಇವಳು ಘೋರ ಗರ್ಜನೆಯಿಂದ ಲೋಕಗಳನ್ನೆಲ್ಲಾ ಕಂಪನಗೊಳಿಸಿದಳು. ಅನಂತರ ಅವಳು ರಾಕ್ಷಸ ನಾಯಕರನ್ನೆಲ್ಲ ವಧಿಸಿ, ತನ್ನ ಪಾದದಿಂದ ಮಹಿಷಾಸುರನನ್ನು ಆಕ್ರಮಿಸಿಕೊಂಡು ಶೂಲದಿಂದ ಪ್ರಹರಿಸಿ ಆತನನ್ನು ಕೊಂದಳು. ಈ ಕಥೆಯನ್ನಾಧರಿಸಿಯೇ ಇಂದು ನಾವೆಲ್ಲ ಹಾಡುವ 'ಮಹಿಷಾಸುರ ಮರ್ದಿನಿ' ಸ್ತೋತ್ರವು ರಚಿಸಲ್ಪಟ್ಟಿದೆ. ಆಗ ಸಮಸ್ತ ಭೂತಗಳೂ ಜಯಘೋಷವನ್ನು ಮಾಡಿದವು. ಮಹಿಷಾಸುರನ ವಧೆಯಾದ ಮೇಲೆ ಇಂದ್ರಾದಿ ದೇವತೆಗಳೆಲ್ಲಾ ದೇವಿಯನ್ನು ಸ್ತುತಿಸಿದರು. ಪ್ರಸನ್ನಳಾದ ದೇವಿಯು, ದೇವತೆಗಳು ಸ್ಮರಿಸಿದಾಗೆಲ್ಲಾ ತಾನು ಬಂದು ಅವರ ಕಷ್ಟಗಳನ್ನು ಪರಿಹರಿಸುವುದಾಗಿಯೂ ಭಕ್ತ ಜನರಿಗೆ ವೈಭವವನ್ನು ಅನುಗ್ರಹಿಸುವುದಾಗಿಯೂ ಮಾತುಕೊಟ್ಟು ಅದೃಶ್ಯಳಾದಳು. ಇಲ್ಲಿಗೆ ಮಧ್ಯಮ ಚರಿತ್ರವು ಮುಗಿಯುತ್ತದೆ.

**ತೃತೀಯ ಚರಿತ್ರೆ :** ಇದಕ್ಕೆ 'ಉತ್ತಮ ಚರಿತ್ರೆ' ಎಂಬ ಮತ್ತೊಂದು ಹೆಸರೂ ಇದೆ. ಶುಂಭ ನಿಶುಂಭರೆಂಬ ಇಬ್ಬರು ರಾಕ್ಷಸರಿಗೆ ಬ್ರಹ್ಮನಿಂದ ವರವಿತ್ತು. ಅಯೋನಿಜೆಯಾದ ಕನ್ಯೆಯ ಹೊರತು ಮತ್ತೆ ಯಾರಿಂದಲೂ ಮೃತ್ಯುವು ಸಂಭವಿಸುವುದಿಲ್ಲವೆಂಬುದೇ ಈ ವರ. ದೇವತೆಗಳೆಲ್ಲಾ ಈ ರಾಕ್ಷಸರ ಉಪಟಳದಿಂದ ಬೇಸತ್ತು ಹಿಮಾಲಯಕ್ಕೆ ಹೋಗಿ, ವಿಷ್ಣುಮಾಯೆಯಾದ ದೇವಿಯನ್ನು ಸ್ತುತಿಸಿದರು. ಆಗ ಜಾಹ್ನವೀ ಜಲದಲ್ಲಿ ಸ್ನಾನ ಮಾಡಲು ಬಂದ ಪಾರ್ವತಿಯು ದೇವತೆಗಳಿಗೆ ಪ್ರತ್ಯಕ್ಷಳಾದಳು. ಅಲ್ಲಿ ಪಾರ್ವತಿಯ ಶರೀರ ಕೋಶದಿಂದ ಅತೀವ ಸುಂದರಿಯೂ

ಮಂಗಳಮೂರ್ತಿಯೂ ಆದ ದೇವಿಯು ಉದ್ಭವಿಸಿದಳು. ಶರೀರ ಕೋಶದಿಂದ ಹುಟ್ಟಿದುದರಿಂದ ಅವಳಿಗೆ 'ಕೌಶಿಕೀ' ಎಂಬ ಹೆಸರು ಬಂದಿತು. ದೇವಿಯ ಸೌಂದರ್ಯದಿಂದ ಮೋಹಗೊಂಡ ಶುಂಭಾಸುರನು ಅವಳನ್ನು ಕರೆತರಲು ತನ್ನ ದೈತ್ಯರನ್ನು ಕಳುಹಿಸಿದನು. ಆದರೆ ಅವರಾರೂ ಜೀವಂತವಾಗಿ ಹಿಂದಿರುಗಲಿಲ್ಲ. ಧೂಮ್ರಲೋಚನನೆಂಬ ದಂಡಾಧಿಕಾರಿಯು ದೇವಿಯ ಹುಂಕಾರದಿಂಲೇ ಭಸ್ಮನಾದನು. ಅನಂತರ ದೇವಿಯ ಲಲಾಟದಿಂದ ಉದ್ಭವಿಸಿದ ಕಾಳೀದೇವಿಯಿಂದ ಚಂಡಮುಂಡರು ನಾಶ ಹೊಂದಿದರು. ದೇವಿಯು ಅವರನ್ನು ವಧಿಸಿದುದರಿಂದ ಅವಳಿಗೆ 'ಚಾಮುಂಡೀ' ಎಂದು ಹೆಸರಾಯಿತು. ಅನಂತರ ರಕ್ತಬೀಜ, ಶುಂಭ, ನಿಶುಂಭ ಇವರೆಲ್ಲರೂ ದೇವಿಯಿಂದ ಹತರಾದರು. ಶುಂಭನು ಮಡಿಯುವುದಕ್ಕೆ ಮೊದಲು ಅಸುರರೆಲ್ಲ ದೇವಿಯ ಶಕ್ತಿಗಳಾದ ಶಿವದೂತೀ, ಕೌಮಾರೀ, ಬ್ರಹ್ಮಾಣೀ, ಮಾಹೇಶ್ವರೀ, ವೈಷ್ಣವೀ ಮೊದಲಾದ ಮಾತೃಕೆಗಳಿಂದ ಮಡಿದರು. ಆದರೆ ಶುಂಭನನ್ನು ಕೊಲ್ಲಲು ದೇವಿಯು ತನ್ನ ಶಕ್ತಿಗಳನ್ನೆಲ್ಲಾ ತನ್ನಲ್ಲಿಯೇ ಉಪಸಂಹರಿಸಿಕೊಂಡು ತಾನೊಬ್ಬಳೇ ನಿಂತಳು. ದೇವಿಯು ತಾನು ಅದ್ವಿತೀಯಳು, ತನ್ನನ್ನು ಬಿಟ್ಟು ಈ ಜಗತ್ತಿನಲ್ಲಿ ಬೇರಾವುದೂ ಇಲ್ಲ ಎಂಬ ವೇದಾಂತ ಸತ್ಯವನ್ನು ಪ್ರಕಟಿಸಿದಳು.

ದೇವಿಯು ತನ್ನ ಶೂಲಾಗ್ರದಿಂದ ಶುಂಭನನ್ನು ಹತ್ಯೆಗೈದಳು. ಅನಂತರ ದೇವಿಯು ದೇವತೆಗಳನ್ನೆಲ್ಲಾ ಪುನಃ ಅನುಗ್ರಹಿಸಿ ತನ್ನ ಮುಂದಿನ ಅವತಾರಗಳನ್ನು ತಿಳಿಸುತ್ತಾಳೆ. ಇಲ್ಲಿಗೆ ಮಹಾಸರಸ್ವತಿಯ ಚರಿತ್ರವು ಮುಗಿಯುತ್ತದೆ.

ಹನ್ನೆರಡನೆಯ ಅಧ್ಯಾಯವು ಫಲಸ್ತುತಿ. ದೇವೀ ಮಾಹಾತ್ಮ್ಯೆಯನ್ನು ಪಾರಾಯಣ ಮಾಡಿದರೆ ಏನೇನು ಫಲ ದೊರೆಯುತ್ತದೆ ಎಂಬುದನ್ನು ಸುಮಾರು ೩೦ ಶ್ಲೋಕದಲ್ಲಿ ದೇವಿ ತನ್ನ ಬಾಯಿಯಿಂದಲೇ ವಿವರಿಸುತ್ತಾಳೆ.

ಒಂದೆಡೆ ಹೇಳುತ್ತಾಳೆ: ಪ್ರತಿ ವರ್ಷದ ಶರನ್ನವರಾತ್ರಿ ಕಾಲದಲ್ಲಿ ನನ್ನ ಪೂಜೆಯನ್ನು ಮಾಡಿ, ಅದರ ಅಂಗವಾಗಿ ನನ್ನ ಈ ಮಾಹಾತ್ಮ್ಯೆವನ್ನು ಭಕ್ತಿಯಿಂದ ಕೂಡಿ ಕೇಳುವ ಮನುಷ್ಯನು ನನ್ನ ಅನುಗ್ರಹದಿಂದ ಸಕಲ ಕಷ್ಟಗಳಿಂದಲೂ ಬಿಡುಗಡೆ ಹೊಂದುವುದಲ್ಲದೆ ಧನ-ಧಾನ್ಯಾದಿ-ಪುತ್ರಾದಿ ಸಕಲ ಕಷ್ಟಗಳಿಂದಲೂ ಬಿಡುಗಡೆ ಹೊಂದುವನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. *(ಅಲ್ಲೇ, xii. ೧೨-೧೩)*

ಈ ಅಧ್ಯಾಯದಲ್ಲಿ ದೇವಿಯು ಪಾರಾಯಣದಿಂದ ದೊರೆಯುವ ಅನೇಕ ಫಲಗಳನ್ನು ತಿಳಿಸಿದ್ದಾಳೆ.

ಕೊನೆಯದಾದ ೧೩ನೆ ಅಧ್ಯಾಯದಲ್ಲಿ ಪಾರಾಯಣವನ್ನು ಋಷಿಯ ಬಾಯಿಂದ ಕೇಳಿದ ಸುರಥನೂ, ವೈಶ್ಯನೂ ನದಿಯ ಮರಳುದಂಡೆಯಲ್ಲಿ ದೇವಿಯನ್ನು ಕುರಿತು ತಪಸ್ಸು ಮಾಡಲು ತೊಡಗಿದರು. ಮಣ್ಣಿನಿಂದ ದೇವಿಯ ಮೂರ್ತಿಯನ್ನು ರಚಿಸಿ ಆಕೆಯ ಪೂಜೆಯನ್ನು ಹೂವು, ಧೂಪ, ದೀಪ, ಮೊದಲಾದವುಗಳ ಮೂಲಕ ನೆರವೇರಿಸಿದರು. ಮೂರು ವರ್ಷಗಳ ಕಠಿಣ ತಪಸ್ಸಿನ ನಂತರ ದೇವಿಯು ಪ್ರತ್ಯಕ್ಷಳಾಗಿ, ಬೇಕಾದ ವರವನ್ನು ಕೇಳಿರೆಂದಳು. ಸುರಥನು ಮತ್ತೆ ರಾಜ್ಯವನ್ನು ಬೇಡಿದನು. ವೈಶ್ಯನಾದರೋ ವೈರಾಗ್ಯಯುಕ್ತವಾದ ಮನಸ್ಸುಳ್ಳವನಾಗಿ 'ನಾನು' 'ನನ್ನದು' ಎಂಬ ಅಭಿಮಾನ ಸಂಗವನ್ನು ಹೋಗಲಾಡಿಸುವ ತತ್ತ್ವಜ್ಞಾನವನ್ನು ಬೇಡಿದನು. ಅದಕ್ಕೆ ದೇವಿಯು ರಾಜನಿಗೆ, ''ನೀನು ಸಾವರ್ಣಿಕನೆಂಬ ಮನುವಾಗಿ ಭೂಲೋಕದಲ್ಲಿ ರಾಜ್ಯವಾಳುತ್ತೀಯೆ'' ಎಂದೂ, ವೈಶ್ಯನಿಗೆ ''ಸಂಸಿದ್ಧಿಯನ್ನು ಪಡೆಯುವುದಕ್ಕೆ ಬೇಕಾದ ಜ್ಞಾನವು ನಿನಗೆ ಉಂಟಾಗಲಿ'' ಎಂದೂ ಆಶೀರ್ವದಿಸಿದಳು.

### ಪಾರಾಯಣ ವಿಧಿ

ದೇವೀಮಾಹಾತ್ಮ್ಯೆಯನ್ನು ಪಾರಾಯಣ ಮಾಡಲೂ ಒಂದು ವಿಧಿಯುಂಟು. ಶುಭ್ರವಾಗಿ ಸ್ನಾನ ಮಾಡಿ, ಒಳ್ಳೆಯ ಬಟ್ಟೆಯನ್ನು ಧರಿಸಿ, ದೇವಿಯ ಮೂರ್ತಿ ಅಥವಾ ಭಾವಚಿತ್ರವನ್ನು ಅಲಂಕರಿಸಿ, ಆಚಮನ, ಪ್ರಾಣಾಯಾಮ, ಸಂಕಲ್ಪ, ದೀಪ ಸ್ಥಾಪನೆ ಮಾಡಿ, ನಂತರ ಪಾರಾಯಣ ಮಾಡಬೇಕು. ಕೊನೆಯಲ್ಲಿ ದೇವಿಗೆ ನೈವೇದ್ಯ ಅರ್ಪಣೆ ಮಾಡಿ, ಆರತಿ ಬೆಳಗಿ ಸಾಷ್ಟಾಂಗ ನಮಸ್ಕಾರದೊಂದಿಗೆ ಮುಗಿಸಬೇಕು.

ಪಾರಾಯಣ ಮಾಡುವಾಗ ಮೊದಲು 'ಕವಚ' ಪಾರಾಯಣ ಮಾಡಬೇಕು. ಅದರಲ್ಲಿ ೬೧ ಶ್ಲೋಕಗಳಿವೆ. ಅದು ಒಂದು ರಕ್ಷೆಯ ರೀತಿ. ಹಿಂದಿನ ಕಾಲದಲ್ಲಿ ಯುದ್ಧದಲ್ಲಿ ಸೈನಿಕರು ಎದೆಗೆ ಬಾಣ ಬೀಳದಿರಲೆಂದು ಕಬ್ಬಿಣದ ಕವಚ ಧರಿಸುತ್ತಿದ್ದರು. ಅದು ಒಂದು ರಕ್ಷೆಯ ರೀತಿ. ಹಾಗೆಯೇ ದೇವೀ ಮಾಹಾತ್ಮ್ಯೆಯ ಕವಚ ಸ್ತೋತ್ರಗಳು. ಈ ಕವಚದ ಸ್ತೋತ್ರಗಳು ನಮ್ಮ ದೇಹದ ಒಂದೊಂದು ಭಾಗವನ್ನೂ ಕೈ, ಕಾಲು, ಎದೆ ಇತ್ಯಾದಿಗಳನ್ನು ಕಾಪಾಡು ಎಂದು ಪ್ರಾರ್ಥಿಸುವುದು.

ಕವಚದ ನಂತರ ನ್ಯಾಸ, ಅಂದರೆ ದೇವಿಯನ್ನು ನಮ್ಮ ದೇಹದ ಒಂದೊಂದು ಭಾಗದಲ್ಲೂ ಸ್ಥಾಪಿಸುವುದು. ಇದರಿಂದ ದೇಹದ ಇಡೀ ಭಾಗಗಳನ್ನು ದೇವೀಮಯವಾಗಿ ಮಾಡುತ್ತೇವೆ. ನಾವು ನಿಜವಾಗಿ ದೇವರನ್ನು ಪೂಜಿಸಬೇಕಾದರೆ ನಾವು ದೇವರಾಗಬೇಕು. 'ದೇವೀ ಭೂತ್ವಾ ದೇವಂ ಯಜೇತ್'. ಅಂದರೆ ನಾವು ನಿಜವಾಗಿ ದೇವರನ್ನು ಪೂಜಿಸಬೇಕಾದರೆ, ನಾವೇ ದೇವರೆಂಬ ದೇವರ ಭಾವವನ್ನು ಆರೋಪಿಸಿಕೊಳ್ಳಬೇಕು.

### ನ್ಯಾಸದ ನಂತರ ಅರ್ಗಲಾ ಸ್ತೋತ್ರ

ಇದರಲ್ಲಿ ೨೭ ಶ್ಲೋಕ ಅಥವಾ ಮಂತ್ರಗಳಿವೆ. ಅರ್ಗಲಾ ಎಂದರೆ ಚಿಲಕ, ಬಾಗಿಲು ಎಂದರ್ಥ. ಅಂದರೆ ಬಾಗಿಲು ತೆಗೆದು ಒಳಗೆ ಹೋಗಬೇಕು. ಈಗ ನಾವು ದೇವಿಯನ್ನು ಹಲವಾರು

ನಾಮಗಳಿಂದ ಸಂಬೋಧಿಸಿ ಪ್ರಾರ್ಥಿಸುತ್ತೇವೆ. ದೇವಿಯ ಹೃದಯದ ಬಾಗಿಲನ್ನು ತೆಗೆಯುವಂತೆ ಪ್ರಾರ್ಥಿಸಬೇಕು.

**ಜಯಂತೀ ಮಂಗಲಾ ಕಾಲೀ ಭದ್ರಕಾಲೀ ಕಪಾಲಿನೀ ।**
**ದುರ್ಗಾ ಕ್ಷಮಾ ಶಿವಾ ಧಾತ್ರೀ ಸ್ವಾಹಹಾ ಸ್ವಧಾ ನಮೋಽಸ್ತುತೇ ॥**

''ಜಯಂತಿ, ಮಂಗಳೆ, ಕಾಳಿ, ಭದ್ರಕಾಳಿ, ಕಪಾಲಿನಿ, ದುರ್ಗೆ, ಕ್ಷಮೆ, ಶಿವೆ, ಧಾತ್ರಿ, ಸ್ವಾಹಾ, ಸ್ವಧಾ ಎಂಬೀ ಹೆಸರುಗಳಿಂದ ಪ್ರಸಿದ್ಧಳಾದ ನಿನಗೆ ನಮಸ್ಕಾರ.'' ಯಾವುದಕ್ಕಾಗಿ ಪ್ರಾರ್ಥನೆ? ''ತಾಯಿ! ನನಗೆ ನಿನ್ನನ್ನು ಪೂಜಿಸಲು ರೂಪವನ್ನು ಕೊಡು, ಜಯವನ್ನು ಕೊಡು, ವಿಘ್ನ ತರುವ ಶತ್ರುಗಳನ್ನು ನಾಶ ಮಾಡು.'' ಹೀಗೆ ೨೭ ಶ್ಲೋಕಗಳಲ್ಲಿ ಪ್ರಾರ್ಥಿಸುತ್ತೇವೆ.

### ಕೀಲಕ ಸ್ತೋತ್ರ

ಕೀಲಕ ಎಂದರೆ ಬೀಗ. ಅದನ್ನೇ ಕೀಲನ, ನಿಷ್ಕೀಲನ ಎಂದೂ ಹೇಳುತ್ತಾರೆ. ಇದರಲ್ಲಿ ೧೪ ಶ್ಲೋಕಗಳಿವೆ. ಈ ಮಂತ್ರಕ್ಕೆ ಶಿವನೇ ಋಷಿ. ಇದರಲ್ಲಿನ ೭ ಹಾಗೂ ೮ನೇ ಶ್ಲೋಕದಲ್ಲಿ ಹೀಗೆ ಹೇಳಲ್ಪಟ್ಟಿದೆ: ''ಇದನ್ನು ಪಾರಾಯಣ ಮಾಡುವವನು ಎಲ್ಲ ರೀತಿಯಿಂದಲೂ ಕ್ಷೇಮವನ್ನು ಹೊಂದುತ್ತಾನೆ. ಇದರಲ್ಲಿ ಸಂಶಯವಿಲ್ಲ. ಯಾವ ಸಾಧಕನು ಕೃಷ್ಣಪಕ್ಷದ ಚತುರ್ದಶಿಯಲ್ಲಾಗಲೀ, ಅಷ್ಟಮಿಯಲ್ಲಾಗಲೀ, ಏಕಾಗ್ರಚಿತ್ತದಿಂದ ಈ ಸಪ್ತಶತಿಯನ್ನು ಪಾರಾಯಣ ಮಾಡುವನೋ ಅಥವಾ ಕೇಳುವನೋ ಅವನಿಗೆ ದೇವಿಯು ಪ್ರಸನ್ನಳಾಗುವಳೇ ಹೊರತು ಇತರ ರೀತಿಯಲ್ಲಿ ಆಚರಿಸುವವನಿಗೆ ಆ ದೇವಿಯು ಪ್ರಸನ್ನಳಾಗಳು. ಮಹಾದೇವನು ಇದನ್ನು ಇಂಥ ಪ್ರತಿಬಂಧದಿಂದ ಬಂಧಿಸಿರುತ್ತಾನೆ'' ಎಂದು ಹೇಳಲ್ಪಟ್ಟಿದೆ.

ಕೀಲಕದ ನಂತರ ಪೂಜೆಯೊಡನೆ ದೇವೀಮಾಹಾತ್ಮ್ಯೆಯನ್ನು ಪಾರಾಯಣ ಮಾಡುವವರು 'ನವಾರ್ಣವಿಧಿ'ಯನ್ನು ಅಂಗನ್ಯಾಸ, ಕರನ್ಯಾಸಗಳೊಡನೆ ವಿಧಿವತ್ತಾಗಿ ಅನುಸರಿಸಬೇಕು. ನವಾರ್ಣ ವಿಧಿಯಲ್ಲಿ ಜಪ ಮಾಡುವಾಗ **'ಓಂ ಐಂ ಹ್ರೀಂ ಕ್ಲೀಂ ಚಾಮುಂಡಾಯೈ ವಿಚ್ಚೇ'**ಎಂಬ ಮಂತ್ರವನ್ನು ೧೦೮ ಬಾರಿ ಜಪಿಸಬೇಕು.

ಇದಾದ ನಂತರ ರಾತ್ರಿಸೂಕ್ತವನ್ನು ಪಠಿಸಬೇಕು. ಇದರಲ್ಲಿ ಎಂಟು ಮಂತ್ರಗಳಿವೆ.

ಇದಾದ ನಂತರ ದುರ್ಗಾಸಪ್ತಶತಿಯನ್ನು ಪಾರಾಯಣ ಮಾಡಬೇಕು. ಮೇಲೆ ಹೇಳಿದ ವಿಧಿಗಳನ್ನು ಅನುಸರಿಸಲಾಗದವರು ನೇರವಾಗಿ ದುರ್ಗಾಸಪ್ತಶತಿಯನ್ನು ಪಾರಾಯಣ ಮಾಡಿದರೆ ಸಾಕು.

ಕೊನೆಯಲ್ಲಿ ದೇವೀಸೂಕ್ತ, ಪ್ರಾಧಾನಿಕ ರಹಸ್ಯ, ವೈಕೃತಿಕ ರಹಸ್ಯ, ಮೂರ್ತಿರಹಸ್ಯ ಹಾಗೂ ಅಪರಾಧ ಕ್ಷಮಾಪಣ ಸ್ತೋತ್ರ

## ಶ್ರೀಮಾತೆಯವರ ಉಪದೇಶಗಳು



❁ ಮನಸ್ಸು ಶುದ್ಧವಾದರೆ ಧ್ಯಾನ, ಧಾರಣ ಯಾಕೆ ಸಾಧ್ಯವಾಗದು? ದರ್ಶನವೇಕಾಗದು? ಜಪ ಮಾಡಲು ಕುಳಿತರೆ ಒಳಗಿನಿಂದ ತಾನಾಗಿಯೇ ಭಗವಂತನ ನಾಮ ಮೇಲಕ್ಕೆ ಎದ್ದು ಬರತೊಡಗುವುದು. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾಗಿರುವುದಿಲ್ಲ.

❁ ಜಪ, ಧ್ಯಾನ ಇತ್ಯಾದಿಗಳನ್ನೆಲ್ಲ ನಿಯಮಿತವಾದ ಸಮಯದಲ್ಲಿ ಆಲಸ್ಯ ಬಿಟ್ಟು ಮಾಡಬೇಕಾಗುವುದು. ದಕ್ಷಿಣೇಶ್ವರದಲ್ಲಿದ್ದಾಗ ಒಂದು ದಿನ ದೇಹಾರೋಗ್ಯ ಚೆನ್ನಾಗಿಲ್ಲವೆಂದು ಸ್ವಲ್ಪ ತಡವಾಗಿ ಎದ್ದೆ. ಕ್ರಮೇಣ ನೋಡುತ್ತೇನೆ, ಬೆಳಿಗ್ಗೆ ಏಳಲು ಮನಸ್ಸೇ ಆಗುತ್ತಿಲ್ಲ. ಆಗ ಅನ್ನಿಸಿತು, ಓಹೋ, ಆಲಸ್ಯ ಹಿಡಿದು ಕೊಂಡುಬಿಟ್ಟಿದೆ ಅಂತ. ಅನಂತರ ಬಲವಂತವಾಗಿ ಬೇಗನೆ ಏಳತೊಡಗಿದೆ, ಬಳಿಕ ಮೊದಲಿನಂತೆಯೇ ಏಳತೊಡಗಿದೆ. ಇಂಥ ವಿಷಯಗಳಲ್ಲೆಲ್ಲ ಕಟ್ಟುನಿಟ್ಟಾಗಿ ಅಭ್ಯಾಸ ಮಾಡ ಬೇಕು.

❁ ಸಾಧನೆ-ಭಜನೆಯಾಗಲಿ, ತೀರ್ಥಕ್ಷೇತ್ರ ಸಂದರ್ಶನವಾಗಲಿ, ಹಣ ಸಂಪಾದನೆ ಯಾಗಲಿ — ಎಲ್ಲವನ್ನೂ ಸಣ್ಣ ಪ್ರಾಯದಲ್ಲೇ ಮಾಡಿ ಮುಗಿಸಬೇಕು. ಆಗ ನಾನು ಕಾಶಿ, ವೃಂದಾವನಗಳಲ್ಲಿ ಕಾಲುನಡಿಗೆಯಲ್ಲೇ ಎಷ್ಟೊಂದು ದರ್ಶನ ಮಾಡಿಬಿಟ್ಟಿದ್ದೆ! ಈಗ ನನಗೆ ಎರಡು ಹೆಜ್ಜೆ ಹೋಗಬೇಕಾದರೂ ಪಲ್ಲಕ್ಕಿ ಬೇಕಾಗಿದೆ. ಅಲ್ಲದೆ ಯಾರಾದರೂ ಆಧರಿಸಿ ಹಿಡಿದು ಕೊಂಡು ನಡೆಸಬೇಕು. ಇಳಿವಯಸ್ಸಿನಲ್ಲಿ ಕಫ, ಶ್ಲೇಷ್ಮಗಳಿಂದ ತುಂಬಿದ ದೇಹದಲ್ಲಿ ಸಾಮರ್ಥ್ಯವಿರಲಾರದು, ಮನಸ್ಸಿಗೂ ಬಲವಿರಲಾರದು. ಆಗ ಏನಾದರೂ ಸಾಧಿಸಲಾಗುವುದೆ? ಈಗಿನ ಹುಡುಗರೆಲ್ಲ ಸಣ್ಣ ವಯಸ್ಸಿನಲ್ಲೇ ಭಗವಂತನಲ್ಲಿ ಮನಸ್ಸನ್ನಿಡುತ್ತಿದ್ದಾರೆ, ಸರಿಯಾಗಿಯೇ ಮಾಡುತ್ತಿದ್ದಾರೆ. ಸರಿಯಾದ ಸಮಯದಲ್ಲೇ ಅದನ್ನು ಮಾಡುತ್ತಿದ್ದಾರೆ. ನೋಡು ಮಗೂ, ಸಾಧನೆ ಅಂತ ಹೇಳು, ಅಥವಾ ಭಜನೆ ಅಂತಲಾದರೂ ಹೇಳು — ಎಲ್ಲವನ್ನೂ ಈಗಲೇ, ಈ ವಯಸ್ಸಿನಲ್ಲೇ ಮಾಡಿ ಮುಗಿಸು. ಕೊನೆಗಾಲದಲ್ಲಿ ಇನ್ನೇನಾಗುವುದು? ಏನೇನು ಮಾಡಲಾಗುವುದೋ ಎಲ್ಲವೂ ಈಗ ಮಾತ್ರ ಸಾಧ್ಯ.

'**ಶ್ರೀಶಾರದಾದೇವಿ ವಚನವೇದ**' ದಿಂದ, ಪು.೨೯-೭೦